ದಿಃ 06.08.2026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.591/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸತ್ಯನಾರಾಯಣ ರೆಡ್ಡಿ | ಪ್ರಾ.ಸಾ.9 |
| ತಂದೆಯ/ಗಂಡನ ಹೆಸರು | : | ಬಿ.ಜಿ.ತಿಪ್ಪಾರೆಡ್ಡಿ | ಚಾ.ಸಾ.8 |
| ವಯಸ್ಸು | : | 62 ವರ್ಷ | |
| ಕೆಲಸ | : | ನಿವೃತ್ತ ಎ.ಎಸ್.ಐ. | ಸಾ ಪ್ರ ಬೋ |
| ವಾಸ | : | ಹೊಳಲ್ಕೆರೆ | ದಿಃ06.08.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು 2018 ರಿಂದ ಡಿಸೆಂಬರ್ 2019 ರವರೆಗೆ ಹೊಳಲ್ಕೆರೆ ಪೊಲಿಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 31.12.2019 ರಂದು ಬೆಳಗ್ಗೆ 11.00 ಗಂಟೆಗೆ ನಅನು ಠಾಣಾ ಕರ್ತವ್ಯದಲ್ಲಿದ್ದಾಗ, ಚಾಸಾ.7 ರವರು ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಯಿಂದ ಹೇಳಿಕೆಯನ್ನು ಪಡೆದುಕೊಂಡು ಬಂದು ನನ್ನ ಸಮಕ್ಷಮ ಹಾಜರುಪಡಿಸಿದ್ದು, ಹೇಳಿಕೆಯನ್ನು ಸ್ವೀಕರಿಸಿಕೊಂಡು ಠಾಣಾ ಮೊಕದ್ದಮೆ ನಂ. 252/2019 ರಂತೆ ಪ್ರ. ವ. ವರದಿಯನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ವರದಿ ಮಾಡಿರುತ್ತೇನೆ. ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ.1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ. ವ. ವರದಿಯನ್ನು ನೋಡಿ ಗುರುತಿಸಿದ್ದು, ನಿಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ದೂರು ದಾಖಲಿಸಿಕೊಂಡ ನಂತರ ಅದೇ ದಿನ ಸಂಜೆ 5 ರಿಂದ 6 ರವರೆಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿನೀಡಿ ಚಾಸಾ. 4 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ. 2 ಮತ್ತು 3 ರವರ ಸಮಕ್ಷಮ ಸ್ಥಳ ಮಹಜರನ್ನು ಜರುಗಿಸಿ ಸ್ಥಳದಲ್ಲಿ ಕಚ್ಚಾ ನಕ್ಷೆ ತಯಾರಿಸಿ ಮು.ಮಾ.1 ಮತ್ತು 2 ನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಾಕ್ಷಿ ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತುಸಿದ್ದು ನಿಪಿ.2(ಡಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ. 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ಸಮಯದಲ್ಲಿ ಚಾಸಾ. 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅಮಾನತ್ತುಪಡಿಸಿಕೊಂಡು ಬಂದ ಮಾಲನ್ನು ಮಾಲುಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ. 9 ರವರಿಗೆ ವಹಿಸಿಕೊಟ್ಟಿರುತ್ತೇನೆ.

ದಿ: 06.08.2026

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಎಂ.ಎನ್.ಸಿ. ವಕೀಲರಿಂದ**

3. ಚಾಸಾ. 7 ರವರು ಪಡೆದುಕೊಂಡು ಬಂದ ಹೇಳಿಕೆಯ ಆಧಾರದಲ್ಲಿ ನಾನು ದೂರನ್ನು ದಾಖಲಿಸಿರುತ್ತೇನೆ. ನಾನು ಖುದ್ದಾಗಿ ಚಾಸಾ. 1 ರವರನ್ನು ವಿಚಾರಣೆ ಮಾಡಿಲ್ಲ. ಮಹಜರಿಗೆ ಸಹಕರಿಸುವ ಕುರಿತಾಗಿ ಚಾಸಾ. 2 ರಿಂದ 4 ರವರಿಗೆ ನೋಟೀಸನ್ನು ನೀಡಿಲ್ಲ. ಸ್ಥಳವನ್ನು ಚಾಸಾ. 4 ರವರು ತೋರಿಸಿರುತ್ತಾರೆ. ಚಾಸಾ. 4 ರವರು ಪುಟ್ಟಪ್ಪರವರ ಪತ್ನಿ. ಮುದ್ದೆ ಮಾಲನ್ನು ಯಾರು ಕೊಟ್ಟರು ಎಂಬ ಪ್ರಶ್ನೆಗೆ ಸಾಕ್ಷಿ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಕಚ್ಚಾ ನಕ್ಷೆಯನ್ನು ಸ್ಥಳದಲ್ಲಿ ತಯಾರಿಸಿರುತ್ತೇವೆ. ಕಚ್ಚಾ ನಕ್ಷೆಯಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಮಹಜರಿಗೆ ಸಾಕ್ಷಿದಾರರ ಸಹಿಗಳನ್ನು ಸ್ಥಳದಲ್ಲಿ ಪಡೆದುಕೊಂಡಿರುತ್ತೇನೆ. ನಾನು ಸ್ಥಳಕ್ಕೆ ಭೇಟಿ ನೀಡದೆ ನಿಪಿ.2 ರ ಮಹಜರನ್ನು ಠಾಣೆಯಲ್ಲಿಯೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ